ಶ್ರೀ ರಾಘವೇಂದ್ರಾಷ್ಟಕಂ

ಶ್ರೀ ಸುಧೀಂದ್ರಯತೀಂದ್ರಸಿಂಧುಜ ಚಂದ್ರಮಾ
ಹತ ತಂದ್ರಿಮಾ
ರಾಘವೇಂದ್ರಗುರುಃ ಪ್ರಮಾಂ ಚ ದದಾತು ಮಾಂ
ಪರಿಪಾತು ಮಾಮ್॥ಪ॥

ಶ್ರೀ ಸುಧೀಂದ್ರ ತೀರ್ಥರು ಯತಿಗಳಿಗೆಲ್ಲ ಇಂದ್ರರಾಗಿದ್ದರು, ಎಂದರೆ ಶ್ರೇಷ್ಠರಾಗಿದ್ದರು. ಶ್ರೀ ಸುಧೀಂದ್ರ ತೀರ್ಥರೆಂಬ ಸಮುದ್ರದಿಂದ ಹುಟ್ಟಿದ ಚಂದ್ರರೇ ಶ್ರೀ ರಾಘವೇಂದ್ರ ತೀರ್ಥರು. ಅವರಲ್ಲಿ ಆಲಸ್ಯಾದಿ ದೋಷರೂಪವಾದ ತಂದ್ರಗಳು ಇರಲಿಲ್ಲ, ಅಂಥ ಗುರುರಾಘವೇಂದ್ರರು ನನಗೆ ದಿವ್ಯ ಜ್ಞಾನವನ್ನು ಕೊಡಲಿ, 'ಮಾಮ್' ಐಶ್ವರ್ಯವನ್ನು ನೀಡಲಿ ಹಾಗೂ ನಮ್ಮನ್ನು ರಕ್ಷಿಸಲಿ.

ಇಂದಿರೇಶ ಮುಕುಂದ ಸದ್ಗುಣ ಗಾಯಕಂ
ಗುರುನಾಯಕಂ
ಛಂದತೋ ವಿತಥೀಕೃತಾಂಗಜ ಸಾಯಕಂ
ದೃಢಕಾಯಕಮ್॥
ವಂದಮಾನ ನೃ ವೃಂದ ಸನ್ಮತಿ ದಾಯಕಂ
ನಿರಸೂಯಕಂ
ನಂದಯಾಮಿ ಲಘುಸ್ತ್ರವೇನ ಗುರೂತ್ತಮಂ
ಯತಿ ಸತ್ತಮಮ್॥೧॥

"ಇಂದಿರೇಶ" ಲಕ್ಷ್ಮೀ ಪತಿಯಾದ "ಮುಕುಂದ" ಮೋಕ್ಷ ಪ್ರದನಾದ ಶ್ರೀ ಹರಿಯ ಸದ್ಗುಣಗಳನ್ನು ಗಾಯನ ಮಾಡುವ ಗುರುಗಳಿಗೆಲ್ಲ ನಾಯಕರಾದ ಮತ್ತು ತಮ್ಮ ಇಚ್ಛೆಯಿಂದ ಕಾಮನ ಬಾಣಗಳನ್ನೆಲ್ಲ ವ್ಯರ್ಥಗೊಳಿಸಿ ಕಾಮನನ್ನು ಗೆದ್ದ ಹಾಗೂ ದೃಢವಾದ ಶರೀರವುಳ್ಳ ಹಾಗೂ ತಮಗೆ ವಂದಿಸುವ ಮಾನವ ವೃಂದಕ್ಕೆಲ್ಲ ಸದ್ಬುದ್ಧಿಯನ್ನು ನೀಡುವ ಹಾಗೂ ಅಸೂಯೆ ಮತ್ಸರ್ಯಾದಿ ದೋಷಗಳು ಇಲ್ಲದಿರುವ ಯತಿ ಶ್ರೇಷ್ಠರೂ ಗುರುಗಳಲ್ಲಿ ಅತಿ ಉತ್ತಮರೂ ಆದ ರಾಘವೇಂದ್ರ ಸ್ವಾಮಿಗಳನ್ನು ಚಿಕ್ಕದಾದ ಈ ಅಷ್ಟಕ ಸ್ತೋತ್ರದಿಂದ ಆನಂದ ಪಡಿಸುತ್ತೇನೆ.

ಸ್ಪಷ್ಟಮಾಶ್ರಿತ ಕಷ್ಟಕೋಟಿ ವಿನಾಶನಂ ಚ
ಸುಧಾಶನಂ
ಶ್ರೇಷ್ಠ ಮಧ್ವ ಮತ ಪ್ರಸಾರಣ ದೀಕ್ಷಿತಂ
ಸದಯೇಕ್ಷಿತಮ್॥
ದುಷ್ಟ ವಾದ್ಯಪಕೃಷ್ಟ ದುರ್ಮತ ದೂಷಣಂ
ಕ್ಷಿತಿಭೂಷಣಂ
ಶಿಷ್ಟಮಾನ್ಯಮಭಿಷ್ಟವೀಮಿ ಯತೀಶ್ವರಂ
ಗುಣಭಾಸ್ವರಮ್॥೨॥

ತಮ್ಮನ್ನು ಆಶ್ರಯಿಸಿದ ಜನರ ಕೋಟ್ಯಾವಧಿ ಕಷ್ಟಗಳನ್ನು ಸ್ಪಷ್ಟವಾಗಿಯೇ ನಾಶ ಮಾಡುವ ಮತ್ತು ನ್ಯಾಯ ಸುಧಾ ಎಂಬ ಗ್ರಂಥದ ರಸವನ್ನು ಪ್ರಾಶನ ಮಾಡುವ, ಶ್ರೇಷ್ಠವಾದ ಮಧ್ವ ಮತ ಪ್ರಸಾರದ ದೀಕ್ಷೆಯನ್ನು ವಹಿಸಿದ ಕೃಪಾ ಪೂರ್ಣವಾದ ದಯಾದೃಷ್ಟಿಯುಳ್ಳ ಹಾಗೂ ದುಷ್ಟವಾದಿಗಳ ಅಪಕೃಷ್ಟವಾದ (ಕೀಳು ವಿಚಾರದ, ದುರ್ಮತಗಳ) ದೂಷಣ ಮಾಡುವ, ಅಖಂಡ ಭೂಮಂಡಲಕ್ಕೆ ಅಲಂಕಾರಪ್ರಾಯರಾದ ಶಿಷ್ಟವಿಶಿಷ್ಟರಾದ ಸಜ್ಜನರಿಗೆಲ್ಲ ಮಾನನೀಯರಾದ ಸದ್ಗುಣಗಳಿಂದ ಕಂಗೊಳಿಸುವ ಸನ್ಯಾಸಿಗಳಿಗೆಲ್ಲ ಒಡೆಯರಾದ ರಾಘವೇಂದ್ರ ಸ್ವಾಮಿಗಳನ್ನು ಸ್ತೋತ್ರ ಮಡುತ್ತೇನೆ.

ರಾಘವೇಂದ್ರ ಶುಭಾಭಿಧಾನ ವಿಭೂಷಿತಂ
ಮಧುಭಾಷಿತಂ
ಮೋಘ ಮಾಯಿ ಮತೋಕ್ತಿ ಖಂಡನ ಪಂಡಿತಂ
ಗುಣಮಂಡಿತಮ್॥
ಶ್ಲಾಘನೀಯ ವಿರಕ್ತಿ ಭಕ್ತಿ ಗುಣಾಕರಂ
ಕಲಿಭೀಕರಂ
ಮೇಽಘ ದುಃಖ ವಿನಾಶನಾಯ ಭಜಾಮ್ಯಹಂ
ಗುರುಮನ್ವಹಂ॥೩॥

ರಾಘವೇಂದ್ರ ಎಂಬ ಹೆಸರಿನಿಂದ ಭೂಷಿತರಾದ, ಜೇನಿನಂತೆ ಮಧುರವಾಗಿ ಮಾತನಾಡುವ ಹಾಗೂ ವ್ಯರ್ಥವಾದ ಮಾಯಾವಾದಿಗಳ ಮತದ ವಚನಗಳನ್ನೆಲ್ಲ ಖಂಡನ ಮಾಡುವಲ್ಲಿ ಪಂಡಿತರಾದ ಮತ್ತು ಸದ್ಗುಣಗಳಿಂದ ಮಂಡಿತರೂ ಆದ ರಾಘವೇಂದ್ರ ಸ್ವಾಮಿಗಳು ಎಂಬ ಗುರುಗಳನ್ನು ನನ್ನ ಪಾಪ ಹಾಗೂ ದುಃಖಗಳ ನಾಶಕ್ಕಾಗಿ ನಾನು ಭಜಿಸುತ್ತೇನೆ. ಆ ಗುರುಗಳ ವೈರಾಗ್ಯ, ಭಕ್ತಿ ಶ್ಲಾಘನೀಯವಾಗಿವೆ. ಇಂಥ ಸದ್ಗುಣಗಳಿಗೆ ಆಶ್ರಯ ಸ್ಥಾನರಾದ ಗುರುಗಳು ಕಲಿಗೆ ಭೀಕರರಾಗಿದ್ದಾರೆ.

ಶ್ರೀವರಾಹಜ ವಾಹಿನೀ ತಟ ಸಂಶ್ರಿತಂ
ಕ್ಷಿತಿವಿಶ್ರುತಂ
ದೇವದೇವ ಸಮೀರ ಸನ್ನಿಧಿ ಮಿಶ್ರಿತಂ ಚ
ಬಹುಶ್ರುತಮ್॥
ಸೇವಕಾರ್ಥಿತ ದಾನ ಕಲ್ಪತರೂಪಮಂ
ವಿಗತೋಪಮಂ

ಭಾವಯಾಮಿ ಚ ಭಕ್ತಿತೋ ಹೃದಿ ಯೋಗಿನಂ

ಗುಣಭಾಗಿನಮ್॥೪॥

ಶ್ರೀವರಾಹದೇವರ ಶರೀರದಿಂದ ಹುಟ್ಟಿದ ತುಂಗಾ ನದಿಯ ತೀರದಲ್ಲಿ ನೆಲೆಸಿದ ಹಾಗೂ ಭೂಲೋಕದಲ್ಲಿ ಸುಪ್ರಸಿದ್ಧರಾದ ಮತ್ತು ದೇವದೇವೋತ್ತಮರಾದ ವಾಯುದೇವರ ಸನ್ನಿಧಿ ಹಾಗೂ ಆವೇಶದಿಂದ ಒಡಗೂಡಿದ ಅದರಂತೆ ವೇದಶಾಸ್ತ್ರಗಳ ದಿವ್ಯ ಜ್ಞಾನಿಗಳಾದ ಶ್ರೀ ರಾಘವೇಂದ್ರರೆಂಬ ಯೋಗಿಗಳನ್ನು ಭಕ್ತಿಯಿಂದ ಹೃದಯದಲ್ಲಿ ಧ್ಯಾನಿಸುತ್ತೇನೆ. ಅನೇಕ ಸದ್ಗುಣಗಳಿಗೆ ಭಾಗಿಗಳಾದ ಅವರು ಸೇವಕರಾದ ಭಾವುಕ ಜನರಿಗೆ ಇಷ್ಟಾರ್ಥಗಳನ್ನು ಪ್ರದಾನ ಮಾಡುವಲ್ಲಿ ಕಲ್ಪವೃಕ್ಷದಂತೆ ಇರುತ್ತಾರೆ. ಅವರಿಗೆ ಉಪಮೆಯೇ ಇರುವದಿಲ್ಲ.

ಕುಷ್ಠಯಕ್ಷ್ಮ ಮುಖೋಗ್ರ ರೋಗನಿವಾರಕಂ

ಭವತಾರಕಂ

ಕಷ್ಟ ಕಶ್ಮಲ ದೀನತಾ ಪರಿಹಾರಕಂ

ಸುಖಕಾರಕಮ್॥

ಪ್ರೇಷ್ಠಮೀಶ ಸಮೀರಯೋಃ ಪರಿಚಾರಕಂ

ಭವಪಾರಕಂ

ಶ್ರೇಷ್ಠಮಾತ್ಮವಿದಾಂ ತಮೋಽಭಿವಿದಾರಕಂ

ಶ್ರುತಿಧಾರಕಮ್॥೫॥

ಕುಷ್ಠರೋಗ, ಕ್ಷಯ ಮೊದಲಾದ ಉಗ್ರವಾದ ರೋಗಗಳನ್ನೆಲ್ಲ ನಿವಾರಿಸಿ ಸಂಸಾರದಿಂದಲೇ ಮಾನವರನ್ನು ಇವರು ಪಾರು ಮಾಡುತ್ತಾರೆ. ಜನರ ಕಷ್ಟ ಪಾಪ ದೈನ್ಯ ಮೊದಲಾದವುಗಳನ್ನು ಪರಿಹರಿಸುವ ಈ ಗುರುಗಳು ಸರ್ವರಿಗೂ ಸುಖಕಾರಕರೂ ಆಗಿದ್ದಾರೆ. ಸಂಸಾರರೂಪ ಸಮುದ್ರವನ್ನು ಕಡೆಹಾಯಿಸುವ ಈ ಗುರುಗಳು ಹರಿವಾಯುಗಳ ಸೇವಕರಾಗಿದ್ದು ಅವರಿಗೆ ಅತ್ಯಂತ ಪ್ರೀತ್ಯಾಸ್ಪದರೂ ಆಗಿದ್ದಾರೆ. ಆತ್ಮ ಜ್ಞಾನಿಗಳಲ್ಲಿ ಶ್ರೇಷ್ಠರಾದ ರಾಘವೇಂದ್ರ ಸ್ವಾಮಿಗಳು ವೇದಶಾಸ್ತ್ರಗಳನ್ನು ತಮ್ಮ ಬುದ್ಧಿಯಲ್ಲಿ ಧರಿಸಿ ಅಜ್ಞಾನವೆಂಬ ಕತ್ತಲೆಯನ್ನು ಹೊಡೆದೋಡಿಸುತ್ತಾರೆ.

ಮಧ್ವ ಬೋಧಿತ ದಿವ್ಯ ಪದ್ಧತಿ ಬೋಧಕಂ

ಖಲಬಾಧಕಂ

ಶುದ್ಧ ವೇದ ಸದಧ್ವ ಮುಖ್ಯ ನಿವೇದಕಂ

ಶುಭಸಾಧಕಮ್॥

ಶ್ರದ್ಧಯಾ ಶ್ರುತಿ ಸತ್ಯತಾ ಪ್ರತಿಪಾದಕಂ

ಶ್ರಿತಮೋದಕಂ

ಸದ್ಗುರೂತ್ತಮ ರಾಘವೇಂದ್ರ ಗುರುಂಶ್ರಯೇ

ವಿಮಲಂಶ್ರಿಯೇ॥೬॥

ಮಧ್ವಾಚಾರ್ಯರು ಬೋಧಿಸಿದ ದಿವ್ಯವಾದ ಪದ್ಧತಿಯನ್ನು ಬೋಧಿಸುವ ಶ್ರೀ ರಾಘವೇಂದ್ರ ಸ್ವಾಮಿಗಳು ದುಷ್ಟರಿಗೆ ಬಾಧಕರೂ ಶಿಷ್ಟರಿಗೆ ಶುಭ ಸಾಧಕರೂ ಮತ್ತು ಶುದ್ಧವಾದ ವೇದದ ಸನ್ಮಾರ್ಗವನ್ನು ಮುಖ್ಯವಾಗಿ ಬೋಧಿಸುವವರೂ ಆಗಿದ್ದಾರೆ. ಆಶ್ರಯಿಸಿದವರಿಗೆ ಆನಂದವನ್ನು ನೀಡುವ ಅವರು ಶ್ರದ್ಧೆಯಿಂದ ವೇದಗಳ ಸತ್ಯತ್ವವನ್ನು ಪ್ರತಿಪಾದಿಸುತ್ತಾರೆ. ಸದ್ಗುರುಗಳಲ್ಲಿ ಉತ್ತಮರಾದ ಮತ್ತು ಪರಿಶುದ್ಧರಾದ ರಾಘವೇಂದ್ರ ಗುರುಗಳನ್ನು ಜ್ಞಾನ, ಭಕ್ತಿ, ವೈರಾಗ್ಯಾದಿ ಸಂಪತ್ತಿಗಳಿಗಾಗಿ ಆರಾಧಿಸುತ್ತೇನೆ.

ಯೋಗಿ ಕೈರವ ವೃಂದ ಮೋದಕ ಚಂದಿರಂ

ದ್ಯುತಿ ಸುಂದರಂ

ಭೋಗಿರಾಟ್ ಶಯ ಗಾನ ವೀಣಿತ ಕಂಧರಂ

ಗುಣಮಂದಿರಮ್॥

ತ್ಯಾಗಿ ತಾಪಸ ವೃಂದ ವಂದ್ಯ ಪುರಂದರಂ

ಸದಯೇಂದಿರಂ

ರಾಘವೇಂದ್ರಮಯೇ ಸ್ವಭಕ್ತ ಧುರಂಧರಂ

ಯತಿಸಿಂಧುರಮ್॥೭॥

ದೈವೀ ತೇಜಸ್ಸಿನಿಂದ ಅತ್ಯಂತ ಸುಂದರರಾದ ರಾಘವೇಂದ್ರ ಸ್ವಾಮಿಗಳು ಯೋಗಿ ಜನರೆಂಬ ಕನ್ನೈದಿಲೆಗಳ ಸಮೂಹವನ್ನು ಅರಳಿಸಿ ಆನಂದಪಡಿಸುವ ಚಂದ್ರನಂತೆ ಇರುತ್ತಾರೆ. ಸದ್ಗುಣಗಳಿಗೆ ತವರು ಮನೆಯಂತೆ ಇರುವ ಅವರು ಶೇಷಶಾಯಿಯಾದ ಶ್ರೀ ಹರಿಯ ಗುಣ ಗಾಯನ ಮಾಡಲು ತಮ್ಮ ಕೊರಳನ್ನೇ ತಂಬೂರಿಯನ್ನಾಗಿ ಮಾಡಿ ಆ ಭಗವಂತನನ್ನು ಹಾಡಿ ಪಾಡುತ್ತಾರೆ. ಆದುದರಿಂದಲೇ ಅವರ ಮೇಲೆ ಮಹಾತಾಯಿಯಾದ ಲಕ್ಷ್ಮೀ ದೇವಿಯು ದಯಾ ಪೂರ್ಣಳಾಗಿದ್ದಾಳೆ. ತ್ಯಾಗಿಗಳೂ ತಪಸ್ವಿಗಳೂ ಆದ ಸಜ್ಜನ ವೃಂದಕ್ಕೆಲ್ಲ ದೇವೇಂದ್ರನಂತೆ ವಂದನೀಯರಾಗಿದ್ದಾರೆ. ಯತಿ ಶ್ರೇಷ್ಠರಾದ ಶ್ರೀ ರಾಘವೇಂದ್ರ ಸ್ವಾಮಿಗಳು ತಮ್ಮ ಭಕ್ತರ ರಕ್ಷಣೆಯ ಭಾರವನ್ನು ಹೊತ್ತಿದ್ದಾರೆ. ಇಂಥ ಗುರುಗಳನ್ನು ನಾನು ಆಶ್ರಯಿಸುತ್ತೇನೆ.

ಮಂತ್ರಮಂದಿರ ನಾಮ್ನಿ ಧಾಮ್ನಿ ನಿವಾಸಿನಂ

ರವಿಭಾಸಿನಂ

ಮಂತ್ರಶಕ್ತಿ ನಿವಾರಿತಾರ್ತ ವಿಪದ್ಗಣಂ

ಬಹುಸದ್ಗುಣಮ್॥

ಯಾಂತ್ರಿಕೇಽಪಿ ಯುಗೇಽಜಭಕ್ತಿ ಸುಭಾವನಾಂ

ಗುರುಸೇವನಾಂ

ತಂತ್ರಯಂತಮಲಂ ಪ್ರಸಾರ್ಯ ಯತಿಂ ಭಜೇ

ಸುಮತಿಂ ಯಜೇ॥೮॥

ಸೂರ್ಯನಂತೆ ತೇಜಸ್ವಿಗಳಾದ ಮತ್ತು ಮಂತ್ರಾಲಯವೆಂಬ ಹೆಸರುಳ್ಳ ಸ್ಥಾನದಲ್ಲಿ ನೆಲೆ ನಿಂತ ಈ ರಾಘವೇಂದ್ರ ಸ್ವಾಮಿಗಳು ಅನೇಕ ಸದ್ಗುಣ ಪೂರ್ಣರಾಗಿದ್ದು ತಮ್ಮ ಮಂತ್ರಶಕ್ತಿಯಿಂದ ದುಃಖಿತರ ಆರ್ತರಾದ ಭಕ್ತರ ಕುತ್ತು ವಿಪತ್ತುಗಳನ್ನು ನಿವಾರಣ ಮಾಡುತ್ತಾರೆ. ಇಂಥ ಯಾಂತ್ರಿಕ ಯುಗದಲ್ಲಿಯೂ ಕೂಡ ಜನರಲ್ಲಿ ಭಗವದ್ಭಕ್ತಿಯ ಸದ್ಭಾವನೆಯನ್ನು ಪ್ರಸಾರ ಮಾಡಿ ಗುರುಸೇವೆಯನ್ನೂ ಜನರಿಂದ ಮಾಡಿಸುತ್ತಾರೆ. ಇಂಥ ಯತಿವರ್ಯರಾದ ಮತ್ತು ಮಹಾಜ್ಞಾನಿಗಳಾದ ರಾಘವೇಂದ್ರ ಸ್ವಾಮಿಗಳನ್ನು ನಾನು ಭಜಿಸುತ್ತೇನೆ ಹಾಗೂ ಪೂಜಿಸುತ್ತೇನೆ.

ಲಾಘವೇಪಿsಭಿಮದ್ಗಿರಾಂ ಪದಗುಂಫನಂ

ರಸಲಿಂಪನಂ

ರಾಘವೇಂದ್ರಗುಣಸ್ತುತೇಃ ಪರಮಷ್ಟಕಂ

ಸಕಲೇಷ್ಟಕಮ್॥

ಶ್ಲಾಘನೀಯಮಿದಂ ರಸಾಶಯಪೇಶಲಂ

ಸ್ಫುಟಕೌಶಲಂ

ಗಾಲವೋದಿತ ಮಾಪಠಂತು ಕೃಪಾಲವೋs

ಸ್ತುಕೃಪಾಲವಃ॥೯॥

ನನ್ನ ವಚನಗಳಲ್ಲಿ ಅರ್ಥಗೌರವ ಮತ್ತು ಭಾವ ಸೌಷ್ಠವಾದಿ ಗುಣಗಳು ಇಲ್ಲದಿದ್ದರೂ ಶ್ರೀ ರಾಘವೇಂದ್ರ ಗುರುಗಳ ಗುಣಗಳ ಸ್ತೋತ್ರರೂಪವಾದುದರಿಂದ ಇಲ್ಲಿಯ ಪದ ಶಬ್ದಗಳ ರಚನೆಗೆ ರಸ ಸಿಂಚನ ಆದಂತಾಗಿದೆ. ಆದುದರಿಂದಲೇ ಎಂಟು ಶ್ಲೋಕ ರೂಪವಾದ ಈ ಅಶ್ಟಕವು "ಸಕಲೇಶ್ಟಕ" ಎಂದರೆ ಸಕಲರ ಇಶ್ಟ ಪೂರಕವೂ ಆಗಿದೆ. ರಸ ಭಾವಗಳ ಕೋಮಲತೆಯಿಂದ ಕೌಶಲವು ಎದ್ದು ಕಾಣುವ ಈ ಅಷ್ಟಕವು ರಾಘವೇಂದ್ರ ಸ್ವಾಮಿಗಳ ಸ್ತೋತ್ರರೂಪವಾದುದರಿಂದ ಶ್ಲಾಘನೀಯವಾಗಿದೆ. ಗಲಗಲಿ ವಂಶದಲ್ಲಿ ಹುಟ್ಟಿದ ನನ್ನಿಂದ ರಚಿತವಾದ ಈ ಅಷ್ಟಕವನ್ನು ಕೃಪಾಳುಗಳು ಚೆನ್ನಾಗಿ ಪಠಿಸಲಿ. ಇದನ್ನು ರಚಿಸಿದವನ ಮೇಲೆ ಅವರ ಕಿಂಚಿತ್ ಕರುಣೆ ಮೈದೋರಲಿ.

(ಕವಿಃ- ಮಹಾಮಹೋಪಾಧ್ಯಾಯ ಪಂಢರಿನಾಥಾಚಾರ್ಯ ಗಲಗಲಿ ರಾಷ್ಟ್ರ ಪ್ರಶಸ್ತಿ- ರಾಜ್ಯ ಪ್ರಶಸ್ತಿ- ರಾಷ್ಟ್ರಪತಿ ಪುರಸ್ಕಾರ- ರಾಮಕೃಷ್ಣ ದಾಲ್ಮಿಯಾ ಪ್ರಶಸ್ತಿ-ವಿಶ್ವೇಶ ತೀರ್ಥ ಪ್ರಶಸ್ತಿ- ಧ್ಯಾನ ಪ್ರಮೋದ ಪ್ರಶಸ್ತಿ ವಿಜೇತರು.)

ಮಹಾಮಹೋಪಾಧ್ಯಾಯ ಪಂ। ಪಂಢರಿನಾಥಾಚರ್ಯ ಗಲಗಲಿ ವಿರಚಿತ **ಶ್ರೀ ರಾಘವೇಂದ್ರಾಷ್ಟಕಂ**
ಎಂಬ ಅಖಂಡ ಕಾವ್ಯ ಸಮಾಪ್ತ.